**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 25-05-2026 ರಂದು ಪ್ರಮಾಣ ಮಾಡಿಸಲಾಯಿತು**

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಿ ಬಿ ಎಸ್ ವಕೀಲರಿಂದಃ</u>**

ಫಿರ್ಯಾದಿಯಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ. ಫಿರ್ಯಾದಿಗೆ ನಾನು ಸಹಿ ಮಾತ್ರ ಮಾಡಿದ್ದು ಬೇರೆ ವಿಷಯ ಗೊತ್ತಿಲ್ಲ. ಜಗಳ ಯಾವ ದಿನಾಂಕದಂದು ಆಗಿತ್ತು ಗೊತ್ತಿಲ್ಲ. ಜಗಳದ ಸಮಯದಲ್ಲಿ ಸ್ಥಳದಲ್ಲಿ ಸಾಕಷ್ಟು ಜನ ಸೇರಿದ್ದರು. ಸ್ಥಳದಲ್ಲಿ ಸಾಕಷ್ಟು ಜನ ಸೇರಿದ್ದರಿಂದ ಯಾರು ಯಾರ ಮೇಲೆ ಹಲ್ಲೆ ಮಾಡಿದರು ಎಂದು ಗೊತ್ತಾಗುವುದಿಲ್ಲ ಅಂದರೆ ನಿಜ. ಜಗಳದ ಸಮಯದಲ್ಲಿ ಯಾವ ಆರೋಪಿ ಹತ್ತಿರ ಯಾವ ಆಯುಧ ಇತ್ತು ಎಂದು ಹೇಳಲು ಬರುವುದಿಲ್ಲ. ಯಾವ ಆರೋಪಿ ಯಾರ ಮೇಲೆ ಹಲ್ಲೆ ಮಾಡಿದ ಎಂದು ಹೇಳಲು ಬರುವುದಿಲ್ಲ. ಜಗಳದಲ್ಲಿ ಯಾರು ಯಾರಿಗೆ ಪೆಟ್ಟಾಯಿತು ಎಂದು ನನಗೆ ಹೇಳಲು ಬರುವುದಿಲ್ಲ. ಜಗಳದಲ್ಲಿ ನನಗೆ ಯಾವುದೆ ರೀತಿಯ ಗಾಯ ಆಗಿರುವುದಿಲ್ಲ. 1 ಮತ್ತು 2 ನೇ ಆರೋಪಿತರು ನನ್ನ ಸೀರಿ ಹಿಡಿದು ಎಳೆದಾಡಿಲ್ಲ. ಜಗಳದ ಸಮಯದಲ್ಲಿ ಯಾರು ಯಾರಿಗೆ ಏನು ಬೈದರು ಎಂದು ಹಾಗೂ ಯಾರಿಗೆ ಗಾಯಗಳು ಆಗಿವೆ ಎನ್ನುವದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಬಡಿಗೆಗಳನ್ನು ನಾನು ನ್ಯಾಯಾಲಯದಲ್ಲಿಯೇ ಮೊದಲ ಬಾರಿಗೆ ನೋಡಿದ್ದೇನೆ ಅಂದರೆ ನಿಜ, ಬೇರೆ ಎಲ್ಲಿಯೂ ನೋಡಿಲ್ಲ. ಮುದ್ದೆಮಾಲಿನಂತಹ ಬಡಿಗೆಗಳು ಎಲ್ಲಾ ಕಡೆಗೆ ಸಿಗುತ್ತವೆ.

ಮೊದಲಿನಿಂದ ಆರೋಪಿತರು ಹಾಗೂ ನಮ್ಮ ಕುಟುಂಬದ ಮಧ್ಯ ವೈಮನಸ್ಸು ಇರುತ್ತದೆ ಅಂದರೆ ನಿಜ. ಆರೋಪಿತರ ವಿರುದ್ಧ ಹಿಂದಿನ ದ್ವೇಷದಿಂದಾಗಿ ಸುಳ್ಳು ದೂರು

ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ಆರೋಪಿತರು ಹಾಗೂ ನಮ್ಮ ಮಧ್ಯ ಯಾವುದೆ ಜಗಳ ಆಗಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**